ಅ)ಈ ಮುಂದೆ ಸರ್ಕಾರವು ಹೇಳಿರುವಂತೆ ಟಿ.ಸಿ.ಹೆಚ್.ಪ್ರವೇಶಗಳನ್ನು ಕೂಡಾ ಮೆಡಿಕಲ್ ಹಾಗೂ ಇಂಜಿನಿಯರಿಂಗ್ ಪ್ರವೇಶ ಪರೀಕ್ಷೆಗಳ ತರಹ ನಡೆಸಲು ಕೊನೆ ಗಳಿಗೆಯಲ್ಲಿ ಅದನ್ನು ಕೈಬಿಡಲು ಕಾರಣವೇನು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ)ಟಿ.ಸಿ.ಹೆಚ್.ತರಬೇತಿಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡುವ ಬಗ್ಗೆ ಈಗಾಗಲೇ ನಿಯಮಾವಳಿ ರೂಪಿಸಲಾಗಿದ್ದು ಅದರಂತೆ ಕಾರ್ಯಾರಂಭವಾಗಿರುತ್ತದೆ. ಮೆಡಿಕಲ್ ಇಂಜಿನಿಯರಿಂಗ್ ಪ್ರವೇಶಕ್ಕೆ ನಡೆಸುವಂತೆ ಪರೀಕ್ಷೆಗಳನ್ನು ನಡೆಸಲು ಉದ್ದೇಶಿಸಿರುವುದಿಲ್ಲ . ಆದರೆ ಪಿಯುಸಿ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಆಧರಿಸಿ ಅರ್ಹತೆಯ ಮೇಲೆ ಸೀಟುಗಳನ್ನು ವಿತರಿಸಲಾಗುವುದು. ಆದ್ದರಿಂದ ಕೈ ಬಿಟ್ಟಿರುವ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ:- ವಿಜಾಪುರ ಜಿಲ್ಲೆಯ ಅನಧಿಕೃತ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1659 (558ಎ)

ಶ್ರೀ ಬಸವನಗೌಡಪಾಟೀಲ್(ವಿಜಾಪುರ):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ವಿಜಾಪುರ ಜಿಲ್ಲೆಯಲ್ಲಿ ಅನಧಿಕೃತ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳೆಷ್ಟು?

ಆ)ಇದ್ದಲ್ಲಿ ಅವುಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ) ಪ್ರಾಥಮಿಕ ಶಾಲೆಗಳು	ಮಾಧ್ಯಮಿಕ ಶಾಲೆಗಳು
1	4

ಆ)ಆಡಳಿತ ಮಂಡಳಿಯವರು ಶಾಲೆಗಳನ್ನು ಮುಚ್ಚುವಂತೆ ನೋಟೀಸ್ ಜಾರಿ ಮಾಡಲಾಗಿದೆ. ಹಾಗೂ ಅವರು ಮುಚ್ಚದಿದ್ದಲ್ಲಿ ಆರಕ್ಷಕ ಇಲಾಖೆಯ ಸಹಯೋಗದೊಂದಿಗೆ ಶಾಲೆಗಳನ್ನು ಮುಚ್ಚಿಸಲು ಕ್ರಮ ಕೈಗೊಳ್ಳಲು ಉಪನಿರ್ದೇಶಕರುಗಳಿಗೆ ಪತ್ರದಲ್ಲಿ ತಿಳಿಸಿದೆ.

ವಿಷಯ:- ವಿಜಾಪುರ ಸರ್ಕಾರಿ ಪ್ರೌಢಶಾಲೆ ದುರಸ್ತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1660 (1863)

ಶ್ರೀ ಬಸವನಗೌಡ ಪಾಟೀಲ್ (ವಿಜಾಪುರ):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ಬಿಜಾಪುರ ನಗರದಲ್ಲಿನ ಸರ್ಕಾರಿ ಪ್ರೌಢಶಾಲೆ ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) 1992-93, 1993-94, 1994-95 ವರ್ಷಗಳಲ್ಲಿ ಈ ಶಾಲೆಗೆ ಎಷ್ಟು ಹಣ ಕಟ್ಟಡ ನಿರ್ವಹಣೆಗಾಗಿ ತೆಗೆದಿರಿಸಲಾಗಿತ್ತು, ವಿನಿಯೋಗಿರುವ ಹಣವೆಷ್ಟು?

ಇ)ಈ ಶಾಲೆಯ ನವೀಕರಣಕ್ಕಾಗಿ ಸರ್ಕಾರದ ಕಾರ್ಯಕ್ರಮಗಳೇನು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

ಅ) ಬಂದಿದೆ.

ಆ) 1. ಸರ್ಕಾರಿ ಬಾಲಕ ಪ್ರೌಢಶಾಲೆ ವಿಜಾಪುರ :-

1992-93 :

1993-94 : ರೂ. 5.25 ಲಕ್ಷಗಳನ್ನು

1994-95 : ತೆಗೆದಿರಿಸಲಾಗಿತ್ತು.

1993-94 – ರೂ. 3. 14 ಲಕ್ಷ ವೆಚ್ಚ ಮಾಡಿದೆ.

1994-95 – ರೂ. 2. 16 ಲಕ್ಷ ವೆಚ್ಚ ಮಾಡಿದೆ.

2. ಸರ್ಕಾರಿ ಬಾಲಕಿಯರ ಪ್ರೌಢಶಾಲೆ ವಿಜಾಪುರ :-

1992-93 :

1993-94 : ರೂ. 3. 82 ಲಕ್ಷ ಕಾದಿರಿಸಿದೆ.

1994-95 :

1993-94 – 2.40 ಲಕ್ಷ ವೆಚ್ಚಮಾಡಿದೆ.

1994-95 – 1. 15 ಲಕ್ಷ ವೆಚ್ಚ ಮಾಡಿದೆ.

ಇ) 1996 -97ನೇ ಸಾಲಿನ ಆಯವ್ಯಯದಲ್ಲಿ ಜಿಲ್ಲಾ ಪಂಚಾಯ್ತಿಯಿಂದ ಹಂತ ಹಂತವಾಗಿ ನವೀಕರಣ ಕಾರ್ಯ ಕೈಗೊಳ್ಳಲಾಗುವುದು.

ವಿಷಯ:- ಕ್ಷ -ಕಿರಣ ಖರೀದಿ ಕುರಿತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1662 (262)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1994-95ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಗೆ ಕ್ಷ-ಕಿರಣಗಳನ್ನು ಖರೀದಿಸಲು ನಿಗದಿ ಮಾಡಿದ ಹಣ ಎಷ್ಟು ? ಎಷ್ಟು ಕ್ಷ-ಕಿರಣ (ಎಕ್ಸ್‌ರೇ)ಗಳನ್ನು ಖರೀದಿಸಲು ಯೋಜಿಸಲಾಗಿತ್ತು.

ಆ) ಖರೀದಿ ಮಾಡಲಾಗಿದೆಯೇ, ಮಾಡಿದ್ದರೆ ಯಾವ ದವಾಖಾನೆಗೆ ಕೊಡಲಾಗಿದೆ.

ಇ) ಹಾಗಿಲ್ಲದಿದ್ದಲ್ಲಿ ಕಾರಣವೇನು?

ಶ್ರೀ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಧಾರವಾಡ ಜಿಲ್ಲೆ (ಗ್ರಾಮಾಂತರ ಪ್ರದೇಶಗಳಿಗೆ)ಕ್ಷ-ಕಿರಣ ಯಂತ್ರಗಳನ್ನು ಖರೀದಿಸಲು ರೂ. 8.00 ಲಕ್ಷಗಳನ್ನು 1994-95ರಲ್ಲಿ ಒದಗಿಸಲಾಗಿತ್ತು. ಕ್ಷ-ಕಿರಣಗಳ ಬೆಲೆಗೆ ಅನುಗುಣವಾಗಿ ಮಾಸಲಾಗಿರುವ ಅನುದಾನಕ್ಕೆ ತಕ್ಕಂತೆ ಖರೀದಿಸಲು ಯೋಜಿಸಲಾಗಿತ್ತು.

ಆ) ಕ್ಷ-ಕಿರಣ ಯಂತ್ರಗಳಿಗೆ 1994-95ನೇ ಸಾಲಿನಲ್ಲಿ ದರಗುತ್ತಿಗೆ ಇಲ್ಲದ ಕಾರಣದಿಂದ ಖರೀದಿ ಮಾಡಲಿಲ್ಲ.

ವಿಷಯ:- ಸಾರ್ವಜನಿಕ ಗ್ರಂಥಾಲಯಗಳ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1663 (2444)